ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 4ನೇ ಏಪ್ರಿಲ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಇದರಡಿ ನಮೂದಿಸಿರುವ ಚೌಬೀನೆ ಮತ್ತು ಬೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಆವುಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ ಮತ್ತು ಡೆಪ್ಯೂಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋಗಳ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟೂ.	ರಿಜರ್ವೆಡ್ ನಾಟೂ.	ಅ॥ ರಿಜರ್ವೆಡ್ ನಾಟೂ.	ಸಾಗುವಾನಿ ಬಲಗು ಮತ್ತು ತುಂಡು.	ಕಾಡಪಾತಿ ಬಲಗು.	ಬೊಂಬು.	ಷರಾ.
1	ಆನವಟ್ಟಿ	1 5 96	30	..	..	151	43	1,325	ಸ್ವಲ್ಪ ಜಾಸ್ತಿ ಕಡಿಮೆ ಆಗಬಹುದು.
2	ಶಿರಾಳಕೊಪ್ಪ	4 5 96	26	89	2	151	23	393	
3	ಶಿಕಾರಿಪುರ	7 5 96	4	32	2	11	..	1,000	
4	ಚನ್ನಗಿರಿ	11 5 96	..	..	..	250	..	2,000	
5	ವುಬ್ರಾಣಿ	13 5 96	..	..	..	42	..	1,500	
6	ಆಯನೂರು	1 6 96	100	100	25	200	..	5,000	
7	ಶಿವಮೊಗ್ಗಾ	8 6 96	110	163	7	36	100	3,864	
8	ಕಣಬೂರು	12 6 96	100	130	20		..	..	
9	ಸಮುದ್ರಹಳ್ಳಿ	13 6 96	..	125	25	..	..	..	

ಹರಾಜು ಷರತ್ತುಗಳು:—ತಾರೀಖು 25—4—95ನೇ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಛಾಯಿಪ್ಪಾಗಿರುವ ತಾರೀಖು 15—3—95ನೇ ನಂಬರ್ 15,229.—155—92ನೇ ನೋಟಿಫಿಕೇಷನ್ ನೋಡತಕ್ಕದ್ದು.

ಸಿ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 18ನೇ ಮಾರ್ಚಿ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್‌ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಡಾಕ್ಟರ್ ಸಿಡ್ನಿಸ್ಮಿತ್ ಸಾಹೆಬರು ಮತ್ತು ಬಿ. ಎ. ಬ್ರಿಟೊ ಜಂಟಿದಾರರಿಂದ ಬರಬೇಕಾದ ಜರ್ಮಿ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಂಡು ಇಥೆಯಂತ ಹುಕುಂ ಮಾಡಲ್ಪಟ್ಟು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಡೇರಿಯಲ್ಲಿ ತಾಲ್ಲೂಕು ಅಮಲ್ದಾರ್ ಯಾ ಸರ್ಕಲ್ ಇನ್ಸ್‌ಪೆಕ್ಟರ್ ರೂಪರೂ ಸ್ಯ॥ 1896ನೇ ಇಸವಿ ಮೇ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಥೆ.

ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ವೇರಿಗೆ 288—1—1 ಮತ್ತು ಬಿಡ್ಡಿ ವಗೈರೆ ಇತರ ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತ್ಯಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.